

## ಕನ್ನಡಿಗರ ಹೆಮ್ಮೆ

ಕನ್ನಡದ ನಟಿ ದೀಪಿಕಾ ಪಡುಕೋಣೆ ಹಿಂದಿ ಚಿತ್ರ ಸಾಮ್ರಾಜ್ಯದ ರಾಣಿಯಾಗಿ ಆಳುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಅಂದದ ಮುಖಪುಟದೊಂದಿಗೆ 'ಸುಧಾ' ಏ.10ರ ಮುಖಪುಟ ಲೇಖನ (ಎನ್.ವಿಶಾಖ) ಸಕಾಲಿಕವಾಗಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಂ.ಜಿ.ರಾಮಚಂದ್ರ, ಮಂಡಗಳಲೆ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಪಿ.ಎನ್.ಶ್ರೀವತ್ಸ, ಬೆಂಗಳೂರು/ ಎಚ್.ಎಸ್.ಹೇಮಲತಾ ಸುಬ್ರಹ್ಮಣ್ಯ, ಹಾಲ್ಮತ್ತೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

## ಯಾಕೆ ಹೆಮ್ಮೆ?

ತಾನು ಕನ್ನಡಿಗಳೆಂದು ಎಲ್ಲೂ ಹೇಳಿಕೊಳ್ಳದ; ತನ್ನ ಮೊದಲ ಚಿತ್ರ ಕನ್ನಡದ 'ಐಶ್ವರ್ಯ' ಎಂದು ಎಲ್ಲೂ ಉಸಿರೆತ್ತದ ದೀಪಿಕಾಳನ್ನು ಕನ್ನಡಿಗಳೆಂದು ಅಭಿಮಾನ ಯಾಕೆ ಪಡಬೇಕು?

-ನಾರಾ ಜ್ಯೋತಿ, ಬೆಂಗಳೂರು/ ಎನ್.ಎಸ್.ತೇಜಸ್ವಿನಿ, ಚಿತ್ರದುರ್ಗ

## ಬೆಚ್ಚಿ ಬೀಳಿಸಿದ ವಿಚಾರ

ಮೂಚಿ ಅವರ 'ಪ್ರಜ್ಞಾ ಸ್ವಾತಂತ್ರ್ಯ' ವಿಚಾರ ಲಹರಿ ಬೆಚ್ಚಿಬೀಳಿಸಿತು. ಮೂವರ ತಲೆ ನಡುವೆ ಬೆಂಕಿ ಹಚ್ಚಿ ಅನ್ನಬೇಯಿಸುವ ಅಂಧಾನುಕರಣೆ ದೇವರಿಗೂ ಅಸಹನೀಯ ಎನಿಸಿರಬೇಕು.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ/ ಡಿ.ದೊಡ್ಡಲಿಂಗೇಗೌಡ, ಕೊಳ್ಳೇಗಾಲ/ ಕೊಹಿಮ, ಬಸರಕೋಡು/ ಸಿ.ವಿ.ಪಾಟೀಲ, ಹರಿಹರ

## ಚಿತ್ತಾಲ ಪರಿಚಯ

ಶ್ರೀನಿವಾಸ ಜೋಕಟ್ಟೆಯವರ 'ಬ್ಯಾಂಡ್‌ಸ್ಟಾಂಡ್‌ನ ಬಂಡೆಗಲ್ಲುಗಳೂ... ಚಿತ್ತಾಲರ ನೆನಪುಗಳೂ' ಲೇಖನ ಚಿತ್ತಾಲರ ವ್ಯಕ್ತಿತ್ವ ಪರಿಚಯಿಸುವಂತಿತ್ತು.

-ಇಮಾಮ್ ಎಚ್., ಕನಕಗಿರಿ

## ಖುಷಿ ಖುಷಿ ಖುಷ್ವಂತ್!

ಖುಷ್ವಂತ್‌ಸಿಂಗ್‌ರ ಜೋಕ್ಸ್ ಓದಿ ಖುಷಿ ಖುಷಿಯಾಯಿತು.

-ಎಚ್.ಆರ್.ದೇಸಾಯಿ, ರಾಯಚೂರು

## ಮಕ್ಕಳಿಗೆ ಪೆಪ್ಪರಮೆಂಟ್

'ಎಳೆಯರ ಅಂಗಳ' ಅಂಕಣದಲ್ಲಿ ಲಲಿತಾ ಕೆ.ಹೊಸಪ್ಯಾಟಿ ಅವರ 'ಡೌಲಿನ ಪೆನ್ನು' ಮಕ್ಕಳಿಗೆ ಪೆಪ್ಪರಮೆಂಟನಂತೆ ಮುದ್ದಾಗಿ ಮೂಡಿಬಂದಿದೆ.

ಮಾಲೀಕಸಾಬ್ ಸಿ. ನದಾಫ್, ಗಂಜಿಹಾಳ/ ಎಸ್.ಜಿ.ಕರನಂದಿ, ಹುನಗುಂದ



## ಅಂದದ, ಚೆಂದದ ಯುಗಾದಿ

ಅಂದದ ಮುದ್ರಣ, ಚೆಂದದ ಚಿತ್ರಣ, ವೈವಿಧ್ಯ ವಿಷಯಗಳಿಂದ ಕೂಡಿದ 'ಸುಧಾ' ಯುಗಾದಿ ಸಂಚಿಕೆ, ಸುಂದರವಾಗಿ ಮೂಡಿಬಂದಿದೆ. 'ಎಂದೂ ಮರೆಯಲಾಗದ ಸಿನಿಮಾ', 'ತಾರೆಯರ ಮನೆ ಮನೆ ಕಥೆ', 'ಬಜಾರಿ ಅತ್ತೆಯರು', 'ಮರಳು ನಾಡಿನ ಅಲೆಮಾರಿ ಒಂಟೆ' ಬಗ್ಗೆ ವಿಶೇಷ ಮಾಹಿತಿ– ಇನ್ನಿತರ ಅಂಕಣಗಳು ಚೆನ್ನಾಗಿವೆ.

-ಆರ್.ಎಸ್. ಚಾಪಗಾವಿ, ಬೆಳಗಾವಿ

## ಅಡುಗೆ ಮನೆ ಕೈಪಿಡಿ

ಮುದ್ದು ಮೊಗದ ಪ್ರಣೀತಾಳ ಮುಖಪುಟದೊಂದಿಗೆ ಯುಗಾದಿ 'ಸುಧಾ' ಸಂತಸ ಮೂಡಿಸಿತು. ಉಚಿತ ಕೊಡುಗೆ 'ಆಹಾರದಲ್ಲಿ ಆರೋಗ್ಯ' ಅತ್ಯಂತ ಉಪಯುಕ್ತ ಕಿಚನ್ ಕೈಪಿಡಿಯಾಗಿದೆ.

'ಸಂಬಂಧಗಳು' ಅಲಕಾ ಕಟ್ಟೇಮನೆ ಹಾಗೂ 'ಸಂಪಿಗೆಯ ಪರಿಮಳ' ಅದೀಬ್ ಅಖ್ತರ್ ಕಥೆಗಳು ಮನಸೆಳೆದವು. ಹೆಜ್ಜೆ ಗುರುತಿನ ಮಹಿಳೆಯರ ಸಾಧನೆಗಳು ಪ್ರೇರಣೆ ಮೂಡಿಸುವಂತಿವೆ. ಕನ್ನಡ ಚಿತ್ರರಂಗದ ಅತಿ ಸುಂದರ ಯುವ ಹೀರೋ ಯಶ್‌ನ ಸರಳ ಮಾತುಗಳು ಇಷ್ಟವಾದವು.

-ರೇಷ್ಮಾ ಎ.ಎಸ್., ಬಾಳೆಹೊನ್ನೂರು

## ತ್ರಿಕೋನ ಉತ್ತಮ ಕಥೆ

ಚಿತ್ರನಟ ರಮೇಶ್ ಅರವಿಂದ್ ಅವರ ಕಥೆ 'ತ್ರಿಕೋನ' ಕಥೆ ಉತ್ತಮವಾಗಿದೆ. ಆಹಾರದಲ್ಲಿ ಆರೋಗ್ಯ ಸಂಗ್ರಹಯೋಗ್ಯ ಪುಸ್ತಕ.

-ಗುರುಮೂರ್ತಿ ಇಂದ್ರಾಳಿ, ಉಡುಪಿ


